ಬೆಳೆಸಬೇಕೆಂದು ಹೇಳಿದ್ದಾರೆ. ಆ ಹುಲ್ಲನ್ನು ಬೆಳೆಸುವ ಕಾರ್ಯಕ್ರಮವನ್ನು ಅಲ್ಲಿ ಹಾಕಿಕೊಳ್ಳುತ್ತೇವೆ. ಮತ್ತೊಂದು ಸಲಹೆ ಏನು ಹೇಳಿದ್ದಾರೆಂದರೆ, ಮದ್ದಡ್ಕ ತೋಟಗಾರಿಕೆ ಇಲಾಖೆಯಲ್ಲಿ 115 ಎಕರೆ ಪ್ರದೇಶದಲ್ಲಿ ಬಹಳ ಹಳೆಯ ಗಿಡಗಳಿವೆ ಎಂದು. ಅವುಗಳನ್ನೆಲ್ಲಾ ತೆಗೆದು ಹಾಕಿ, ಹೊಸ ಗಿಡಗಳನ್ನು ನೆಟ್ಟರೆ ನಮ್ಮ farmಗೆ ಇನ್ನೂ ಹೆಚ್ಚು income ಬರುತ್ತದೆ. ಸಾಮಾನ್ಯ ಜನರು ನೋಡುವುದಕ್ಕೆ ಹೋದಾಗಲೂ ಸಹಿತ ನಾವು ಹೊಸ ತರಹದ ಬೆಳೆಗಳನ್ನು ಮಾಡುವಂಥ ನಿಟ್ಟಿನಲ್ಲಿ ಅವರಿಗೆ ಸೂಚನೆ ಹೋಗುತ್ತದೆ. ಆದ್ದರಿಂದ ಆ ರೀತಿ ಸಲಹೆ ಕೊಟ್ಟಿರುವ ಬಗ್ಗೆ ಕ್ರಮ ತೆಗೆದುಕೊಂಡು ಆ ಗಿಡಗಳನ್ನು ನೆಡುವಂಥ ಕಾರ್ಯಕ್ರಮವನ್ನು ಮಾಡುತ್ತೇವೆ.

ಶ್ರೀ ಕೆ. ಪ್ರಭಾಕರ ಬಂಗೇರ : ಪ್ರತಿ ಕ್ಷೇತ್ರದಲ್ಲಿ ಸಾವಯವ ಕ್ಷೇತ್ರಗಳನ್ನಾಗಿ ಮಾಡಲಿಕ್ಕೆ ಮತ್ತು ಎರೆಹುಳ ಗೊಬ್ಬರ ಘಟಕಗಳನ್ನು ನಿರ್ಮಾಣ ಮಾಡುತ್ತೇವೆಂದು ಹೇಳಿದ್ದಾರೆ. ಎಲ್ಲೆಲ್ಲಿ ಅವರುಗಳು ಮಾಡುತ್ತಾರೆ, ಅದರೊಟ್ಟಿಗೆ ಚಾರ್ಮಾಡಿಯಲ್ಲಿ ಕೂಡ 195 ಎಕರೆದ ಜಾಗವಿದೆ. ಆ ಜಾಗದಲ್ಲಿ ನಮ್ಮ ಬೆಳ್ತಂಗಡಿ ತಾಲ್ಲೂಕಿಗೆ ಮಾತ್ರವಲ್ಲ. ಬೇರೆ ತಾಲ್ಲೂಕುಗಳಿಗೆ ಕೂಡ ಕೊಡುವಂಥ ಸಸಿಗಳನ್ನು ಉತ್ಪಾದನೆ ಮಾಡಿಕೊಡುವಂಥದ್ದು ಸಾಧ್ಯವಿದೆ. ಅಲ್ಲಿಯೂ ಕೂಡ ಹೆಚ್ಚು ಉತ್ಪಾದನೆ ಬರುವ ರೀತಿಯಲ್ಲಿ ತೆಂಗಿನ ಗಿಡಗಳು, ಅಡಕೆ ಗಿಡಗಳು, ರಬ್ಬರ್ ಗಿಡಗಳನ್ನು ಮಾಡುವುದರ ಮೂಲಕವಾಗಿ ನರ್ಸರಿಗಳನ್ನು ಮಾಡಿದಾಗ ನಮ್ಮ ತಾಲ್ಲೂಕಿಗೆ ಅಲ್ಲದೇ ಹತ್ತಿರದ ತಾಲ್ಲೂಕುಗಳಿಗೆ ಕೂಡ ಅದರಿಂದ ಪ್ರಯೋಜನವಾಗುತ್ತದೆ. ಅದನ್ನು ಕೂಡ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ಒತ್ತಾಯ ಮಾಡುತ್ತೇನೆ.

ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ : ಮಾನ್ಯ ಅಧ್ಯಕ್ಷರೆ, ಕೃಷಿಯಲ್ಲಿ ಸಾವಯವ ಗೊಬ್ಬರದ ಬಗ್ಗೆ ಬಹಳಷ್ಟು ರೈತರಿಗೆ ಅರಿವು ಬಂದಿದೆ. ಈ ಮಳೆಯೊಳಗೆ ಎರೆಹುಳ ಗೊಬ್ಬರವನ್ನು ತಯಾರು ಮಾಡುವ ಘಟಕ ಪ್ರತಿ ತೋಟಗಾರಿಕೆ ಕ್ಷೇತ್ರದಲ್ಲಿ ನಾವು ಅದನ್ನು ಹಾಕಿಕೊಂಡಿದ್ದೇವೆ. ಅದರ ಜೊತೆಗೆ ಅವರು ಹೇಳಿದ ಹಾಗೆ ಮಾವು, ಕಾಳುಮೆಣಸು, ಗೇರು ಸಸಿ, ಸಪೋಟ ಜೊತೆಗೆ ತೆಂಗಿನ ಗಿಡವನ್ನು ಸಹ ಬೆಳೆಸಿ ರೈತರಿಗೆ ಕೊಡುವಂಥ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ.

ವಿಷಯ : ಸವದತ್ತಿಯಲ್ಲಿ ಬೀಜ ಸಂಸ್ಕರಣಾ ಘಟಕ ಪ್ರಾರಂಭಿಸುವುದು.

189 (1002) ಶ್ರೀ ಮಾಮನಿ ವಿಶ್ವನಾಥ ಕರಿಬಸಪ್ಪ (ಪರಸಗಡ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾವಿ ಜಿಲ್ಲೆ ಸವದತ್ತಿ ನಗರದಲ್ಲಿ ಬೀಜ ಸಂಸ್ಕರಣಾ ಘಟಕ ಪ್ರಾರಂಭಿಸುವ ಪ್ರಸ್ತಾವನೆಯನ್ನು 1998ರಲ್ಲಿ ಸಲ್ಲಿಸಿದ್ದು, ಸರಕಾರದ ಗಮನಕ್ಕೆ ಬಂದಿದೆಯೇ;

ಆ) ಸದರಿ ಘಟಕಕ್ಕೆ ಸವದತ್ತಿಯಲ್ಲಿ 12 ಗಂಟೆ ನಿವೇಶನವನ್ನು ಮಹಿಸಿಕೊಟ್ಟಿದ್ದರೂ ಬೀಜ ಸಂಸ್ಕರಣಾ ಘಟಕ ಮಂಜೂರಿ ವಿಳಂಬವಾಗಲು ಕಾರಣವೇನು;

ಇ) ಮಂಜೂರಾತಿಗಾಗಿ ಕೂಡಲೆ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಬಂಡೆಪ್ಪ ಕಾಶಂಪೂರ (ಕೃಷಿ ಸಚಿವರು) :

ಅ) ಇಲ್ಲ. ಸವದತ್ತಿಯಲ್ಲಿ ಕರ್ನಾಟಕ ರಾಜ್ಯ ಬೀಜ ನಿಗಮವು ಬೀಜ ದಾಸ್ತಾನು ಕೇಂದ್ರ ಹಾಗೂ ನಿಗಮದ ಸ್ಥಳೀಯ ಕಚೇರಿ ನಿರ್ಮಿಸಲು ಉದ್ದೇಶಿಸಿದೆ.

ಆ) ಸವದತ್ತಿ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣದಲ್ಲಿ 12 ಗುಂಟೆ ಜಾಗವನ್ನು ಬೀಜ ದಾಸ್ತಾನು ಕೇಂದ್ರ ಮತ್ತು ನಿಗಮದ ಸ್ಥಳೀಯ ಕಚೇರಿ ಕಟ್ಟಡದಸ ನಿರ್ಮಾಣಕ್ಕಾಗಿ ಮಾತ್ರ ಪಡೆಯಲಾಗಿದೆ. ಬೀಜ ಘಟಕದ ಸ್ಥಾಪನೆಗೆ ವಿಳಂಬವಾಗಿದೆಯೆಂಬ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ : ಮಾನ್ಯ ಅಧ್ಯಕ್ಷರೆ, ಬೆಳಗಾವಿ ಜಿಲ್ಲೆ ಸವದತ್ತಿ ನಗರದಲ್ಲಿ ಬೀಜ ಸಂಸ್ಕರಣ ಘಟಕವನ್ನು ಪ್ರಾರಂಭಿಸಲು ಪ್ರಸ್ತಾವನೆಯನ್ನು 1998ರಲ್ಲಿ ಸಲ್ಲಿಸಿದ್ದು, APMC ಯಲ್ಲಿ 12 ಗುಂಟೆ ಜಾಗವನ್ನು ಕೂಡ ಕೊಟ್ಟಿದ್ದೇವೆ. ಆದರೆ ಪ್ರಸ್ತಾವನೆ ಇಲ್ಲವೆಂದು ಉತ್ತರದಲ್ಲಿ ತಿಳಿಸಿದ್ದಾರೆ. ನಾವೇ ಸ್ವತಃ estimate ಸಲ್ಲಿಸಿದ್ದೇವೆ. ನಾವೇ ಸ್ವತಃ ಅರ್ಜಿಯನ್ನು ಕೊಟ್ಟು estimate ಅನ್ನು ಸಹ ಒದಗಿಸಿದ್ದೇವೆ. ಪ್ರಸ್ತಾವನೆ ಇಲ್ಲವೆಂದು ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ದಯವಿಟ್ಟು ಈ ರೀತಿಯಾಗಿ ಉತ್ತರವನ್ನು ಕೊಡಬಾರದೆಂಬುದು ನನ್ನ ವಿನಂತಿ. ಈಗಾಗಲೇ APMC ಯಲ್ಲಿ 12 ಗುಂಟೆ ಪ್ರಾಮುಖ್ಯವಾದ ಜಾಗ ಏನು ತಮಗೆ ಕೊಟ್ಟಿದೆ, ಆ processing unit ಮಾಡಲಿಕ್ಕೆ ಬಹಳವೇನೂ ಹಣ ಖರ್ಚಾಗುವುದಿಲ್ಲ. Processing unit ಎಂದರೆ ಅಲ್ಲಿರುವ ಬೀಜಗಳನ್ನು ಸ್ವಚ್ಛ ಮಾಡತಕ್ಕಂಥದ್ದು. Grading ಮಾಡಲಿಕ್ಕೆ ಬಹಳಷ್ಟು ಜಾಗವೂ ಬೇಕಾಗಿಲ್ಲ ಹಣವೂ ಖರ್ಚಾಗುವುದಿಲ್ಲ. ಅಲ್ಲಿ ಬೆಳೆದಂಥ ರೈತರು ಅಲ್ಲಿ seeds produce ಮಾಡುವ ರೈತರು ಧಾರವಾಡಕ್ಕೆ ತೆಗೆದುಕೊಂಡು ಹೋಗಿ processingಗೆ ಕೊಡಲಿಕ್ಕೆ ಬಹಳಷ್ಟು ತೊಂದರೆಯಾಗಿದೆ. ಹೀಗಾಗಿ ರೈತರು ಆ ಬೀಜವನ್ನು ಬೆಳೆಯುವುದನ್ನೇ ಕಡಿಮೆ ಮಾಡಿದ್ದಾರೆ. ಅಲ್ಲಿ ರೈತರಿಗೆ ಶೋಷಣೆಯಾಗುತ್ತಿದೆ. ಇಲ್ಲಿ ಉತ್ಪನ್ನ ಬೆಳೆದು ಧಾರವಾಡಕ್ಕೆ ತೆಗೆದುಕೊಂಡು ಹೋಗಿ processing ಮಾಡಿಸಲಿಕ್ಕೆ 8–10 ಸಲ ನಾವು ಅಲ್ಲಿ ಹೋಗಿಬರಬೇಕಾಗುತ್ತದೆ ಮತ್ತು tranportation ವೆಚ್ಚವಾಗುತ್ತದೆ. ಅದಲ್ಲದೇ ಅದರೊಳಗಡೆ 40 ಪರ್ಸೆಂಟ್ reject ಆಗಿರುವುದನ್ನು ವಾಪಸ್ಸು ತರಲಿಕ್ಕೆ ಕೂಡ ಬಹಳಷ್ಟು ತೊಂದರೆಯಾಗಿದೆ. ಹೀಗಾಗಿ 12 ಗಂಟೆ ಜಾಗವನ್ನೇನು ಕೊಟ್ಟಿದ್ದೇವೆ ಅಲ್ಲಿ processing unit ಅನ್ನು ಮಾಡಿಕೊಡಬೇಕೆಂದು ನಾನು ಮಾನ್ಯ ಕೃಷಿ ಸಚಿವರಲ್ಲಿ ನಿಮ್ಮ ಮುಖಾಂತರ ಕೇಳಲಿಕ್ಕೆ ಇಚ್ಛಿಪಡುತ್ತಿದ್ದೇನೆ.

ಶ್ರೀ ಬಂಡೆಪ್ಪ ಕಾಶಂಪೂರ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ processing unit ಈಗಾಗಲೇ ಧಾರವಾಡದಲ್ಲಿದೆ. ಅಲ್ಲಿ ಸುಮಾರು 12 ಸಾವಿರದ ಕ್ವಿಂಟಾಲ್ capacity ಯದ್ದು ಇದೆ. ಈಗ ಇವರೇನು ಕೇಳಿದ್ದಾರೆ ಅದಕ್ಕೆ ಸಂಬಂಧಿಸಿದ ಪ್ರಸ್ತಾವನೆ ಸಲ್ಲಿಸಿದ್ದು, ಈಗ ನಾವು ಅಲ್ಲಿ storage godown ಈ ರೀತಿಯ ಯೋಜನೆಗಳನ್ನು ಅಲ್ಲಿ ತೆಗೆದುಕೊಂಡಿದ್ದೇವೆಯೇ ವಿನಃ

processing unit ಬಗ್ಗೆ ಯೋಜನೆಯನ್ನು ನಾವು ತೆಗೆದುಕೊಂಡಿಲ್ಲ. ಏಕೆಂದರೆ ಅಲ್ಲಿ ಸವದತ್ತಿ ಧಾರವಾಡ hardly 80–90 ಕಿ.ಮೀ. ಇರಬಹುದು. ಈಗ ಅದಕ್ಕೆ ಮತ್ತಷ್ಟು ಸಮಗ್ರವಾಗಿ ಈ ರೈತರ ಬೇಡಿಕೆ ಪ್ರಕಾರ ಸದ್ಯಕ್ಕೆ ಕೊಪ್ಪಳದಲ್ಲೊಂದು ನಿಗಮದಲ್ಲಿ mobile unit ಇದೆ. ಅದನ್ನು ಸವದತ್ತಿಗೆ shift ಮಾಡಿ ಕೆಲಸ ಕಾರ್ಯಗಳನ್ನು ಮಾಡುತ್ತೇವೆಂದು ಸದನದ ಮೂಲಕ ಅವರಿಗೆ ಹೇಳಲು ಬಯಸುತ್ತೇನೆ.

ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ : ಧನ್ಯವಾದಗಳು. Processing Unitನ mobile unit ಅನ್ನು shift ಮಾಡಿಕೊಟ್ಟರೆ ಬಹಳಷ್ಟು ಅನುಕೂಲವಾಗುತ್ತದೆ. ದಯವಿಟ್ಟು ಅದನ್ನು ತೀವ್ರಗತಿಯಲ್ಲಿ ಮಾಡಿಕೊಡಬೇಕಾಗಿ ವಿನಂತಿ.

ಸೊರಬ ತಾಲ್ಲೂಕಿನಲ್ಲಿ ಹುದ್ದೆಗಳ ಭರ್ತಿ ಮತ್ತು ತೋಟಗಾರಿಕೆಯ ಚಟುವಟಿಕೆಗಳು

190 (539) ಶ್ರೀ ಕುಮಾರ್ ಬಂಗಾರಪ್ಪ ಎಸ್. (ಸೊರಬ) : ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸೊರಬ ತಾಲ್ಲೂಕಿನಲ್ಲಿರುವ ತೋಟಗಾರಿಕೆ ಇಲಾಖೆಗೆ ಮಂಜೂರಾದ ಮತ್ತು ತುಂಬಲಾಗಿರುವ ಹುದ್ದೆಗಳೆಷ್ಟು; (ಹುದ್ದೆವಾರು ವಿವರ ನೀಡುವುದು)

ಆ) ಸದರಿ ತಾಲ್ಲೂಕಿನ ತೋಟಗಾರಿಕೆ ಇಲಾಖೆಯಿಂದ ಕೈಗೊಳ್ಳಲಾದ ಘಾರಂ ಚಟುವಟಿಕೆಗಳ ಹಾಗೂ ಅವುಗಳ ನಿರ್ವಹಣೆಯನ್ನು ಹೇಗೆ ಮಾಡಲಾಗುತ್ತಿದೆ?

ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ (ತೋಟಗಾರಿಕೆ ಸಚಿವರು) :

ಅ) ಸೊರಬ ತಾಲ್ಲೂಕಿನಲ್ಲಿರುವ ತೋಟಗಾರಿಕೆ ಇಲಾಖೆಗೆ 10 ಹುದ್ದೆಗಳು ಮಂಜೂರಾಗಿವೆ. ಅವುಗಳಲ್ಲಿ 5 ಹುದ್ದೆಗಳನ್ನು ತುಂಬಲಾಗಿದೆ. ಹುದ್ದೆವಾರು ವಿವರಗಳು ಈ ಕೆಳಕಂಡಂತಿರುತ್ತವೆ.

ಕ್ರ. ಸಂ.	ವೃಂದ	ಮಂಜೂರಾದ ಹುದ್ದೆಗಳ ಸಂಖ್ಯೆ	ತುಂಬಲಾದ ಹುದ್ದೆಗಳ ಸಂಖ್ಯೆ
1.	ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು	01	–
2.	ಸಹಾಯಕ ತೋಟಗಾರಿಕೆ ನಿರ್ದೇಶಕರು	01	–
3.	ಸಹಾಯಕ ತೋಟಗಾರಿಕೆ ಅಧಿಕಾರಿ	01	–
4.	ತೋಟಗಾರಿಕೆ ಸಹಾಯಕ	03	02
5.	ಪ್ರಥಮ ದರ್ಜೆ ಸಹಾಯಕರು	01	01
6.	ತೋಟಗಾರರು	03	03
	ಒಟ್ಟು	**10**	**05**